ಹಿಂದೂ ಜನಜಾಗೃತಿ ಸಮಿತಿ ಪುರಸ್ಕೃತ ಗ್ರಂಥ !

‘ಆದರ್ಶ ರಾಷ್ಟ್ರರಚನೆ’ ಗ್ರಂಥಮಾಲಿಕೆ : ಹಿಂದೂ ರಾಷ್ಟ್ರ - ಖಂಡ ೧

# ಹಿಂದೂ ರಾಷ್ಟ್ರ ಏಕೆ ಬೇಕು ?

**(ಹಿಂದೂ ರಾಷ್ಟ್ರ : ವಿಶ್ವಕಲ್ಯಾಣಕ್ಕಾಗಿ ಕಾರ್ಯನಿರತ ಸಾತ್ತ್ವಿಕ ಜನರ ರಾಷ್ಟ್ರ !)**

(Why do we need a ‘Hindu Rashtra’ ?)

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೭’ ರಲ್ಲಿ ಓದಿ.)

**ಶ್ರೀ. ರಮೇಶ ಶಿಂದೆ** (ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ)

**ಶ್ರೀ. ಚೇತನ ರಾಜಹಂಸ** (ವಕ್ತಾರರು, ಸನಾತನ ಸಂಸ್ಥೆ)



**ಸನಾತನ ಸಂಸ್ಥೆ**


ಡಿಸೆಂಬರ್ ೨೦೨೨ ರ ವರೆಗೆ ಸನಾತನದ ೩೬೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೨,೧೧,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ :** ಸೌ. ಜಾಹ್ನವಿ ಶಿಂದೆ ಮತ್ತು ಸೌ. ಯೋಗೇಶ್ರೀ ಫೋಳೆ

**First Edition** : Akshaya Trutiya, Kaliyug Varsh 5115
(13th May 2013)

**Third Edition** : Yugadi, Kaliyug Varsh 5122
(25th March 2020)

**Third Edition**
**Third Reprint** : Makara Sankranti, Kaliyug Varsh 5124
(15th January 2023)

Translated from the original Marathi text 'Hindu Rashtra Ka Have ?'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ, ತಮಿಳು ಮತ್ತು ಬಂಗಾಲಿ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ನಾಯಕ್, ಶ್ರೀ. ಶ್ರೀನಿವಾಸ ಶೆಟ್ಟಿಗಾರ್
ಶ್ರೀಮತಿ ಅಶ್ವಿನಿ ಪ್ರಭು

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 110/-
(ಈ ಆವೃತ್ತಿಯ ರಿಯಾಯಿತಿ ಬೆಲೆ : ₹ 50/-)

**ISBN** : 978-93-87641-85-3 ॐ ಗ್ರಂಥ ಕ್ರ. : 197

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ


卐 ಗ್ರಂಥದ ಸಂಕಲನಕಾರರ ಪರಿಚಯ ೫

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೮

卐 ಮನೋಗತ ೯

೧. ಪ್ರಸ್ತಾವನಾತ್ಮಕ ವಿವೇಚನೆ ೧೩

೨. ರಾಷ್ಟ್ರೀಯ ಸಮಸ್ಯೆಗಳ ದೃಷ್ಟಿಕೋನದಿಂದ 'ಹಿಂದೂ ರಾಷ್ಟ್ರ' ಏಕೆ ಬೇಕು ? ೧೮

೩. ಧಾರ್ಮಿಕ ಸಮಸ್ಯೆಗಳ ದೃಷ್ಟಿಕೋನದಿಂದ 'ಹಿಂದೂ ರಾಷ್ಟ್ರ' ಏಕೆ ಬೇಕು ? ೪೮

೪. ಸದ್ಯದ ರಾಜ್ಯಪದ್ಧತಿಗಿಂತ 'ಹಿಂದೂ ರಾಷ್ಟ್ರ'ವೇ ಏಕೆ ಶ್ರೇಷ್ಠವಾಗಿದೆ ? ೭೧

೫. ಧರ್ಮಾಧಿಷ್ಠಿತ 'ಹಿಂದೂ ರಾಷ್ಟ್ರ' ಎಂದರೇನು ? ೯೯

೬. ಧರ್ಮಾಧಿಷ್ಠಿತ 'ಹಿಂದೂ ರಾಷ್ಟ್ರ'ದ ಸ್ಥಾಪನೆಗಾಗಿ ಯೋಗದಾನ ನೀಡುವುದರ ಆವಶ್ಯಕತೆ ! ೧೦೧

೭. ಅಖಿಲ ಮಾನವಜಾತಿಯ ಹಿತಕ್ಕಾಗಿ ಹಿಂದೂ ಧರ್ಮಾಧಿಷ್ಠಿತ ರಾಜ್ಯವ್ಯವಸ್ಥೆಯೇ ಬೇಕು ! ೧೦೫

卐 ಅಧ್ಯಾಯ ೧ : 'ಹಿಂದೂ ರಾಷ್ಟ್ರ' ಅಥವಾ 'ಹಿಂದೂ ರಾಷ್ಟ್ರ'ದ ಬೇಡಿಕೆ ಸಾಂವಿಧಾನಿಕವೋ ಅಥವಾ ಅಸಾಂವಿಧಾನಿಕವೋ ? ೧೦೯



**ಸನಾತನದ ಚೈತನ್ಯಮಯ ಗ್ರಂಥಸಂಪತ್ತಿನ ಮುಖ್ಯ ವೈಶಿಷ್ಟ್ಯಗಳು !**

- 卐 ಅಧ್ಯಾತ್ಮದಲ್ಲಿನ ಪ್ರತಿಯೊಂದರ ಬಗ್ಗೆ 'ಏಕೆ ಮತ್ತು ಹೇಗೆ' ಎಂಬ ಉತ್ತರಗಳು !
- 卐 ವಿಜ್ಞಾನಯುಗದ ವಾಚಕರಿಗೆ ಅರ್ಥವಾಗುವಂತಹ ಆಧುನಿಕ ವೈಜ್ಞಾನಿಕ ಭಾಷೆಯಲ್ಲಿನ (ಉದಾ. ಕೋಷ್ಟಕ, ಶೇಕಡಾವಾರು) ಜ್ಞಾನ !
- 卐 ತಾತ್ತ್ವಿಕ ವಿವೇಚನೆಯಷ್ಟೇ ಅಲ್ಲ, ಸಾಧನೆಯ ಪ್ರಾಯೋಗಿಕ ಮಾರ್ಗದರ್ಶನ !
- 卐 ಪೃಥ್ವಿಯಲ್ಲಿ ಎಲ್ಲಿಯೂ ಸಿಗದ ಅಮೂಲ್ಯ ಈಶ್ವರೀ ಜ್ಞಾನವಿರುವ ಗ್ರಂಥ !
- 卐 ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳ ಸಂದರ್ಭದಲ್ಲಿ ವೈಜ್ಞಾನಿಕ ಉಪಕರಣಗಳ ಮೂಲಕ ಮಾಡಿದ ಸಂಶೋಧನೆ, ಸೂಕ್ಷ್ಮಸ್ತರದಲ್ಲಿನ ಪ್ರಕ್ರಿಯೆಯನ್ನು ತೋರಿಸುವ ಚಿತ್ರಗಳು ಮತ್ತು ಬರವಣಿಗೆಗಳು !

## ಮನೋಗತ




ಜಗತ್ತಿನಲ್ಲಿ ಕ್ರೈಸ್ತರ ೧೫೭, ಮುಸಲ್ಮಾನರ ೫೨, ಬೌದ್ಧರ ೧೨, ಮತ್ತು ಜ್ಯೂಗಳ ೧ ರಾಷ್ಟ್ರವಿದೆ. ಹಿಂದೂಗಳ ರಾಷ್ಟ್ರವು ಈ ಸೌರಮಂಡಲದಲ್ಲಿ ಎಲ್ಲಿದೆ ? ಹೌದು, ಹಿಂದೂಗಳ ಒಂದು ಸನಾತನ ರಾಷ್ಟ್ರವು ೧೯೪೭ ರ ತನಕ ಈ ಭೂಮಿಯ ಮೇಲಿತ್ತು. ಆದರೆ ಆ ರಾಷ್ಟ್ರದ ಇಂದಿನ ಸ್ಥಿತಿ ಹೇಗಿದೆ ?

### ಇಂದಿನ ಪ್ರಜಾಪ್ರಭುತ್ವ ಮತ್ತು ಛತ್ರಪತಿ ಶಿವಾಜಿ ಮಹಾರಾಜರ 'ಹಿಂದೂ ರಾಷ್ಟ್ರ' !

'ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ರಚಿತಗೊಂಡ ಸರಕಾರ' ಎಂಬ ಪ್ರಜಾಪ್ರಭುತ್ವದ ವ್ಯಾಖ್ಯೆಯು ಭಾರತದಂತಹ ಜಗತ್ತಿನ ಅತಿ ದೊಡ್ಡ ರಾಷ್ಟ್ರಕ್ಕೆ ಮಾತ್ರ 'ಸ್ವಾರ್ಥಿಗಳಿಂದ, ಸ್ವಾರ್ಥಕ್ಕಾಗಿ ಮತ್ತು ಸ್ವಾರ್ಥಿ ರಾಜಕಾರಣಿಗಳ ಸರಕಾರ' ಎಂದಾಗಿದೆ. ಈ ಗ್ರಂಥದಲ್ಲಿ ಭಾರತದ ಎದುರಿಗಿರುವ ಅನೇಕ ಸಮಸ್ಯೆಗಳನ್ನು ಹೇಳಲಾಗಿದೆ. ಇಲ್ಲಿ ಹೇಳಲಾಗಿರುವ ಸಮಸ್ಯೆಗಳನ್ನು ಓದಿ ಕೆಲವರ ಮನಸ್ಸಿನಲ್ಲಿ, 'ಹಿಂದೂ ರಾಷ್ಟ್ರ'ದಲ್ಲಿ ಈ ಸಮಸ್ಯೆಗಳು ಹೇಗೆ ಪರಿಹಾರವಾಗಲಿವೆ ? ಹೀಗೆ ಇತಿಹಾಸದಲ್ಲಿ ಎಂದಾದರೂ ಘಟಿಸಿದೆಯೇ ? ಎಂಬ ಸಂಶಯ ಮೂಡಬಹುದು. 'ಹೌದು, ಇತಿಹಾಸದಲ್ಲಿ ಇಂತಹ ಘಟನೆ ಘಟಿಸಿದೆ ! ಛತ್ರಪತಿ ಶಿವಾಜಿ ಮಹಾರಾಜರ 'ಹಿಂದೂ ರಾಷ್ಟ್ರ (ಹಿಂದವೀ ಸ್ವರಾಜ್ಯ)' ಸ್ಥಾಪನೆಯಾದೊಡನೆ ಆಗಿನ ಇಂತಹ ಎಲ್ಲ ಸಮಸ್ಯೆಗಳು ದೂರವಾಗಿದ್ದವು !' ಇಂದಿನಂತೆಯೇ ಛತ್ರಪತಿ ಶಿವಾಜಿ ಮಹಾರಾಜರು ಜನಿಸುವ ಮೊದಲು ಹಿಂದೂ ಸ್ತ್ರೀಯರ ಶೀಲವು ಸುರಕ್ಷಿತವಾಗಿರಲಿಲ್ಲ, ಪ್ರತ್ಯಕ್ಷ ಜೀಜಾಮಾತೆಯ ಮೈದುನನ ಹೆಂಡತಿಯನ್ನೇ ಯವನ ಸರದಾರನು ನೀರು ತರುವ ದಾರಿಯ ಮೇಲಿನಿಂದ ಅಪಹರಿಸಿಕೊಂಡು ಹೋಗಿದ್ದನು. ಆ ಕಾಲದಲ್ಲಿಯೂ ದೇವಸ್ಥಾನಗಳನ್ನು ಭ್ರಷ್ಟಗೊಳಿಸಲಾಗುತ್ತಿತ್ತು ಮತ್ತು ಗೋಮಾತೆಯ ಕುತ್ತಿಗೆಯ ಮೇಲೆ ಕಸಾಯಿಯ ಕತ್ತಿ ಯಾವಾಗ ಬೀಳುವುದು ಎಂಬುದನ್ನು ಹೇಳಲು ಆಗುತ್ತಿರಲಿಲ್ಲ. ಮಹಾರಾಜರ 'ಹಿಂದೂ ರಾಷ್ಟ್ರ'ವು ಸ್ಥಾಪನೆಯಾದ ಕೂಡಲೆ ದೇವಸ್ಥಾನಗಳ ಧ್ವಂಸವು ನಿಂತಿತು, ಇಷ್ಟೇ ಅಲ್ಲ ದೇವಸ್ಥಾನಗಳನ್ನು ಕೆಡವಿ ಕಟ್ಟಲಾಗಿದ್ದ ಮಸೀದಿಗಳು ಪುನಃ ಹಿಂದಿನಂತೆ ದೇವಸ್ಥಾನಗಳಲ್ಲಿ ರೂಪಾಂತರಗೊಂಡವು. ಕಣ್ಣೀರು ಸುರಿಸುವ ಗೋಮಾತೆಯು ಆನಂದದಿಂದ ಅಂಬಾ ಎನ್ನತೊಡಗಿದಳು. 'ಗೋಹತ್ಯೆಯನ್ನು ನಿಲ್ಲಿಸಿ !' ಎಂಬ ಬೇಡಿಕೆಯ ಲಕ್ಷಗಟ್ಟಲೆ ಸಹಿಗಳು ಸರಕಾರಕ್ಕೆ ಹೋಗಲಿಲ್ಲ

ಅಥವಾ ಮಹಾರಾಜರೂ ಯಾವುದೇ 'ಗೋಹತ್ಯಾ ಪ್ರತಿಬಂಧಕ ಕಾನೂನ'ನ್ನು ಮಂತ್ರಿಮಂಡಲದಲ್ಲಿ ಮಂಡಿಸಲಿಲ್ಲ. ಕೇವಲ 'ಹಿಂದೂ ರಾಷ್ಟ್ರ'ದ ಸ್ಥಾಪನೆಯು ಹಿಂದೂದ್ವೇಷಿಗಳ ಎದೆಯಲ್ಲಿ ನಡುಕ ಹುಟ್ಟಿಸಲು ಸಾಕಾಯಿತು !

ಇಂದು ನಮಗೆ ಬೆಲೆಯೇರಿಕೆ ಕಾಣಿಸುತ್ತಿದೆ; ಆದರೆ 'ಮಹಾರಾಜರ ಆಳ್ವಿಕೆಯಲ್ಲಿ ಬೆಲೆಯೇರಿಕೆಯಿಂದ ಪ್ರಜೆಗಳಿಗೆ ತುಂಬಾ ತೊಂದರೆಯಾಗಿತ್ತು' ಎಂದು ಎಲ್ಲಿಯಾದರೂ ಓದಿದ್ದೇವೆಯೇ ? 'ಜೈ ಜವಾನ್, ಜೈ ಕಿಸಾನ್' ಎಂದು ಘೋಷಣೆ ಮಾಡುವ ರಾಜಕಾರಣಿಗಳು ಇಂದು ಜವಾನ್ ಮತ್ತು ಕಿಸಾನ್ ಇಬ್ಬರನ್ನೂ ಸಾಯಲು ಬಿಡುತ್ತಿದ್ದಾರೆ. ಮಹಾರಾಜರಿಗೆ ಕೇವಲ ರೈತರ ಪ್ರಾಣ ಮಾತ್ರವಲ್ಲ, ಅವರು ಕಷ್ಟದಿಂದ ಬೆಳೆಸಿದ ತರಕಾರಿಗಳೂ ಅಮೂಲ್ಯವೆನಿಸುತ್ತಿದ್ದವು. 'ರೈತರು ಬೆಳೆಸಿದ ಸೊಪ್ಪಿನ ದಂಟನ್ನೂ ಯಾರೂ ಮುಟ್ಟಬಾರದು' ಎಂದು ಅವರು ಆಜ್ಞೆಯನ್ನೇ ಹೊರಡಿಸಿದ್ದರು. ಮಹಾರಾಜರು 'ಕಿಸಾನ್'ರ ಜೊತೆಗೇ 'ಜವಾನ'ರ ಕಾಳಜಿಯನ್ನೂ ವಹಿಸಿದ್ದರು. ಹೋರಾಟದಲ್ಲಿ ಗಾಯಾಳುಗಳಾದ ಅನೇಕ ಸೈನಿಕರಿಗೆ ಪುರಸ್ಕಾರಗಳೊಂದಿಗೆ ಚಿನ್ನದ ಆಭರಣಗಳನ್ನೂ ನೀಡಿ ಅವರನ್ನು ಸನ್ಮಾನಿಸುತ್ತಿದ್ದರು. ಕಾರ್ಗಿಲ್ ಯುದ್ಧದಲ್ಲಿ ಪ್ರಾಣವನ್ನು ಕಳೆದುಕೊಂಡಿರುವ ಅನೇಕ ಸೈನಿಕರ ವಿಧವೆಯರಿಗಾಗಿ ೨೦೧೦ ರಲ್ಲಿ ಮಹಾರಾಷ್ಟ್ರದ ಮುಂಬೈಯಲ್ಲಿ 'ಆದರ್ಶ' ಸೊಸೈಟಿಯನ್ನು ನಿರ್ಮಿಸಲಾಯಿತು; ಆದರೆ ಅದರಲ್ಲಿ ಒಬ್ಬನೇ ಒಬ್ಬ ಸೈನಿಕನ ವಿಧವೆಗೂ ಮನೆ (ಫ್ಲ್ಯಾಟ್) ಸಿಗಲಿಲ್ಲ. ಭ್ರಷ್ಟಾಸುರರೇ ಆ ಎಲ್ಲ ಮನೆಗಳನ್ನು ಲಪಟಾಯಿಸಿದರು ! ತದ್ವಿರುದ್ಧವಾಗಿ ಮಹಾರಾಜರು ಸಿಂಹಗಡದ ಹೋರಾಟದಲ್ಲಿ ಸಹಾಯ ಮಾಡಿದ ತಾನಾಜಿಯ ಮಗನ ಮದುವೆಯನ್ನು ಮಾಡಿಕೊಟ್ಟು ಅವರ ಕುಟುಂಬದವರ ಕಾಳಜಿ ವಹಿಸಿದರು !

## ಭಾರತದೆದುರಿನ ಬಾಹ್ಯ ಸಮಸ್ಯೆಗಳೂ 'ಹಿಂದೂ ರಾಷ್ಟ್ರ'ದಲ್ಲಿ ಪರಿಹಾರವಾಗುವವು !

'ಹಿಂದೂ ರಾಷ್ಟ್ರ'ದಲ್ಲಿ ಆಂತರಿಕ ಸಮಸ್ಯೆಗಳ ಜೊತೆಗೆ ಬಾಹ್ಯ ಸಮಸ್ಯೆಗಳೂ ಪರಿಹಾರವಾಗುವುವು. ಬಾಹ್ಯ ಸಮಸ್ಯೆಗಳಲ್ಲಿ ಪಾಕಿಸ್ತಾನ ಮತ್ತು ಚೀನಾದಿಂದ ಭಾರತದ ಮೇಲೆ ಯಾವುದೇ ಕ್ಷಣದಲ್ಲಿ ಆಗಬಹುದಾದ ಆಕ್ರಮಣವು ಮುಖ್ಯ ಸಮಸ್ಯೆಯಾಗಿದೆ. ಛ. ಶಿವಾಜಿಯವರ ಕಾಲದಲ್ಲಿಯೂ ಇಂತಹದ್ದೇ ಸ್ಥಿತಿಯಿತ್ತು. ಔರಂಗಜೇಬನು ಮಹಾರಾಜರ ಚಿಕ್ಕ ರಾಜ್ಯವನ್ನು ಕಬಳಿಸಲು ನೋಡುತ್ತಿದ್ದನು; ಆದರೆ 'ಮಹಾರಾಜರ ರಾಜ್ಯಾಭಿಷೇಕವಾಗಿ ವಿಧಿವತ್ತಾಗಿ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಯಿತು' ಎಂಬುದನ್ನು ಕೇಳಿ ಅವನು ಹೆದರಿದನು ! ಅನಂತರ ಮುಂದೆ

ಮಹಾರಾಜರು ಸ್ವರ್ಗವಾಸಿಯಾಗುವ ವರೆಗೆ ಅವನು ಕೇವಲ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ದಕ್ಷಿಣಕ್ಕೂ ಬರಲಿಲ್ಲ ! ಒಮ್ಮೆ 'ಹಿಂದೂ ರಾಷ್ಟ್ರ' ಸ್ಥಾಪನೆ ಆಯಿತೆಂದರೆ ನಮ್ಮೆಲ್ಲ ಅಕ್ಕಪಕ್ಕದವರು ತಾವಾಗಿಯೇ ಸರಿ ದಾರಿಗೆ ಬರುವರು !

## 'ಹಿಂದೂ ರಾಷ್ಟ್ರ'ದಲ್ಲಿ ಮುಸಲ್ಮಾನರಿಗೇನು ಮಾಡುವರು ?

'ಹಿಂದೂ ರಾಷ್ಟ್ರ'ದ ವಿಷಯ ಬಂದೊಡನೆ ಜಾತ್ಯತೀತವಾದಿಗಳಿಗೆ ಒಂದು ಅನವಶ್ಯಕ ಪ್ರಶ್ನೆ ಉದ್ಭವಿಸುತ್ತದೆ, ಅದೇನೆಂದರೆ 'ಹಿಂದೂ ರಾಷ್ಟ್ರ'ದಲ್ಲಿ ಮುಸಲ್ಮಾನರಿಗೇನು ಮಾಡುವರು ?' ವಾಸ್ತವದಲ್ಲಿ ಈ ಪ್ರಶ್ನೆಯು ಮುಸಲ್ಮಾನರಿಗೆ ಬರಬೇಕಾಗಿತ್ತು. ಆದರೆ ಅವರಿಗೆ ಬಂದಿಲ್ಲ. ಅವರು 'ನಗುತ್ತಾ ತೆಗೆದುಕೊಂಡೆವು ಪಾಕಿಸ್ತಾನ, ಹೋರಾಡಿ ಪಡೆಯುವೆವು ಹಿಂದೂಸ್ಥಾನ' ಎನ್ನುತ್ತಿರುತ್ತಾರೆ. ಅರ್ಥಾತ್ ಈ ಪ್ರಶ್ನೆಗೂ ಉತ್ತರವಿದೆ. ಮಂಬರುವ 'ಹಿಂದೂ ರಾಷ್ಟ್ರ'ದಲ್ಲಿ ಮುಸಲ್ಮಾನರು ಮಾತ್ರವಲ್ಲ, ಎಲ್ಲ ಪಂಥದವರೊಂದಿಗೆ ಶಿವಾಜಿಯವರ ರಾಜ್ಯದಲ್ಲಿದ್ದಂತಹ ವರ್ತನೆಯೇ ಸಿಗಲಿದೆ !

ಸಂಕ್ಷಿಪ್ತವಾಗಿ, ಸೂರ್ಯನು ಉದಯಿಸುವಾಗ ಅಂಧಃಕಾರವು ತಾನಾಗಿಯೇ ದೂರವಾಗುತ್ತದೆ. ಎಲ್ಲ ದುರ್ಗಂಧವು ವಾತಾವರಣದಲ್ಲಿ ಕರಗಿ ಹೋಗುತ್ತದೆ. ಕತ್ತಲೆಗೆ ಅಥವಾ ದುರ್ಗಂಧಕ್ಕೆ ಯಾರೂ 'ದೂರ ಹೋಗಿ, ಸೂರ್ಯ ಉದಯಿಸುತ್ತಿದ್ದಾನೆ' ಎಂದು ಹೇಳುವುದಿಲ್ಲ. ತನ್ನಿಂದತಾನೇ ಎಲ್ಲವೂ ಘಟಿಸುತ್ತದೆ. ಅದೇ ರೀತಿ ಇಂದು ಭಾರತದಲ್ಲಿ ಹರಡಿಕೊಂಡಿರುವ ವಿವಿಧ ಸಮಸ್ಯಾರೂಪಿ ಕತ್ತಲೆ ಮತ್ತು ದುರ್ಗಂಧವೂ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಗುತ್ತಲೇ ನಾಶ ವಾಗಲಿದೆ. ಧರ್ಮಾಚರಣಿ ರಾಜಕಾರಣಿಗಳಿಂದ ಭಾರತದ ಎದುರಿಗಿನ ಎಲ್ಲ ಸಮಸ್ಯೆಗಳು ಬಗೆಹರಿಯುವುವು ಮತ್ತು ಸದಾಚಾರದಿಂದ ಎಲ್ಲ ಜನತೆಯೂ ಸುಖಿಯಾಗುವುದು !

## ಒಂದೆರಡು ಸಮಸ್ಯೆಗಳ ವಿರುದ್ಧ ಹೋರಾಡುವುದಕ್ಕಿಂತ 'ಹಿಂದೂ ರಾಷ್ಟ್ರ'ದ ಸ್ಥಾಪನೆಯನ್ನು ಮಾಡುವುದು ಆವಶ್ಯಕ !

ಕೇವಲ ಭಾರತದ ಜನರಿಗಾಗಿ ಮಾತ್ರವಲ್ಲ, ಅಖಿಲ ಮಾನವಜಾತಿಯ ಕಲ್ಯಾಣಕ್ಕಾಗಿ ಸ್ಥಾಪಿಸಬೇಕಾದ 'ಹಿಂದೂ ರಾಷ್ಟ್ರ' ಮಾತ್ರ ತಾನಾಗಿಯೇ ಸ್ಥಾಪನೆಯಾಗಲಾರದು. ಪಾಂಡವರಿಗೆ ಕೇವಲ ಐದು ಹಳ್ಳಿಗಳು ಬೇಕಾಗಿದ್ದವು, ಅವೂ ಸಹ ಅವರಿಗೆ ಸಹಜವಾಗಿ ಸಿಗಲಿಲ್ಲ. ನಮಗೆ ಕಾಶ್ಮೀರದಿಂದ ಕನ್ಯಾಕುಮಾರಿಯ

ವರೆಗಿನ ಅಖಂಡ 'ಹಿಂದೂ ರಾಷ್ಟ್ರ' ಬೇಕಾಗಿದೆ. ಇದಕ್ಕಾಗಿ ಮಾತ್ರ ಬಹಳ ದೊಡ್ಡ ಹೋರಾಟವನ್ನೇ ಮಾಡಬೇಕಾಗುವುದು. ಭಾರತದ ಎದುರಿಗಿರುವ ಒಂದೆರಡು ಸಮಸ್ಯೆಗಳ (ಉದಾ. ಗೋಹತ್ಯೆ, ಮತಾಂತರ, ಗಂಗೆಯ ಮಾಲಿನ್ಯ, ಕಾಶ್ಮೀರ ಸಮಸ್ಯ, ಸ್ವಭಾಷೆಗಳ ರಕ್ಷಣೆ ಮುಂತಾದವುಗಳ) ವಿರುದ್ಧ ಪ್ರತ್ಯೇಕವಾಗಿ ಒಬ್ಬಿಬ್ಬರು ಹೋರಾಡುವುದಕ್ಕಿಂತ ಎಲ್ಲ ಸಮವಿಚಾರಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸೇರಿಕೊಂಡು 'ಹಿಂದೂ ರಾಷ್ಟ್ರ ಸ್ಥಾಪನೆ'ಯ ಧ್ಯೇಯವನ್ನಿಟ್ಟುಕೊಂಡು ಕೃತಿ ಮಾಡಿದರೆ ಈ ಹೋರಾಟವು ಸ್ವಲ್ಪ ಸುಗಮವಾಗುವುದು.

ಸ್ವಾಮಿ ವಿವೇಕಾನಂದರು, ಯೋಗಿ ಅರವಿಂದರು, ಸ್ವಾತಂತ್ರ್ಯವೀರ ಸಾವರಕರರು ಮುಂತಾದ ಹಿಂದೂ ಧರ್ಮದ ಮಹಾನ್ ಪುರುಷರು ಆಶಿಸಿದ ಧರ್ಮಾಧಿಷ್ಠಿತ 'ಹಿಂದೂ ರಾಷ್ಟ್ರ' ಸ್ಥಾಪನೆಯಾಗಲು ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯವು ಹಿಂದೂ ಸಮಾಜಕ್ಕೆ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

**ಹಿಂದೂ ರಾಷ್ಟ್ರಕ್ಕೆ ಸಂಬಂಧಿಸಿದ ಸನಾತನದ ಇತರೆ ಗ್ರಂಥಗಳು !**

**ಹಿಂದೂ ರಾಷ್ಟ್ರ : ಆಕ್ಷೇಪ ಮತ್ತು ಖಂಡನೆ**

- ಹಿಂದೂ ರಾಷ್ಟ್ರಕ್ಕೆ ಕುರಿತಾದ ಆಕ್ಷೇಪಗಳ ವಾಸ್ತವಿಕತೆಯೇನು ?
- ಭಾರತವು ಸ್ವಯಂಭೂ ಹಿಂದೂ ರಾಷ್ಟ್ರ ಹೇಗೆ ?
- ಸ್ವಾತಂತ್ರ್ಯ ನಂತರ ಭಾರತವು ಹಿಂದೂ ರಾಷ್ಟ್ರವಾಗಲು ಏಕೆ ಸಾಧ್ಯವಾಗಲಿಲ್ಲ ?

**ಸದ್ಗುರು (ಸೌ.) ಅಂಜಲಿ ಗಾಡಗೀಳರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದನ್ನು ಸೇರಿಸಿರುವುದರ ಹಿಂದಿನ ಕಾರಣ :** ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "'ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.